ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

ಸಂಖ್ಯೆ : ಬೆಂಅಪ್ರಾ/ಇಇ/643/14-15
No. :

ದಿನಾಂಕ: 10.03.2015
Date :

ಶ್ರೀ ಹೆಚ್.ಎಸ್.ದೊರೆಸ್ವಾಮಿ
ಭೂಕಬಳಿಕೆ ವಿರೋಧ ಹೋರಾಟ ಸಮಿತಿ,
ನಂ.759, 5ನೇ ಮೈನ್, 8ನೇ ಕ್ರಾಸ್,
ಆರ್.ಟಿ.ನಗರ, 2ನೇ ಬ್ಲಾಕ್,
ಬೆಂಗಳೂರು – 32.

ಮಾನ್ಯರೆ

ವಿಷಯ:– ಭೂಕಬಳಿಕೆ ವಿರೋಧ ಹೋರಾಟ ಸಮಿತಿಯವರು ಭೂಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರಿರುವ ಮಾಹಿತಿ.
ಉಲ್ಲೇಖ:– ತಮ್ಮ ಪತ್ರದ ದಿನಾಂಕ 09.10.2014.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದಲ್ಲಿನ ಪತ್ರದಲ್ಲಿ ತಾವು ಕೋರಿರುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಕಬಳಿಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore - 560 020. Facsimile : 2334 5799, E-mail : bda@vsnl.com

# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯವರು ಕೋರಿರುವ ಮಾಹಿತಿಗಳು

| ಕ್ರ.ಸಂ | ಕೋರಿರುವ ಮಾಹಿತಿ | ಉತ್ತರ |
|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಪಾರ್ಕ್, ಆಟದ ಮೈದಾನ, ಸಿ.ಎ ನಿವೇಶನ, ಕಾಲುವೆ, ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು | ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ವಿಭಾಗಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |
| 2 | ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿಡಿಎಗೆ ವಾಪಸ್ ಪಡೆಯಲಾಗಿದೆ? ವಿವರಗಳನ್ನು ಒದಗಿಸುವುದು | |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು | |
| 4 | ವಾಪಸ್ ಪಡೆಯಲಾಗದಿರುವ ಪ್ರಕರಣಗಳೆಷ್ಟು? ಮತ್ತು ವಾಪಸ್ ಪಡೆಯಲಾಗದಿರುವುದಕ್ಕೆ ಕಾರಣಗಳೇನು? ವಿವರಗಳನ್ನು ಒದಗಿಸುವುದು | |
| 5 | ಬಿಡಿಎ ವ್ಯಾಪ್ತಿಯಲ್ಲಿ ಅಧಿಕೃತ ಬಡಾವಣೆಗಳು ಎಷ್ಟು? ಅಧಿಕೃತ ಬಡಾವಣೆಗಳಲ್ಲಿ ಸ್ಥಳೀಯ ಸಂಸ್ಥೆಗೆ / ಪ್ರಾಧಿಕಾರಕ್ಕೆ ವಿಹಿತವಾಗಬೇಕಾಗಿದ್ದ ಸಿ.ಎ ನಿವೇಶನ, ಪಾರ್ಕು, ಆಟದ ಮೈದಾನ, ರಸ್ತೆ, ಕಾಲುವೆ ಮುಂತಾದ ಸ್ಥಳಗಳು ನಿಯಮಾನುಸಾರ ಸಂಸ್ಥೆ / ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು | |
| 6 | ವರ್ಗಾಯಿಸಲಾಗದಿದ್ದರೆ ಬಿಡಿಎ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು | |
| 7 | ಬಿಡಿಎ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳು / ಬಡಾವಣೆಗಳು / ಅಪಾರ್ಟ್‌ಮೆಂಟ್‌ಗಳು ಎಷ್ಟು? ವಿವರಗಳನ್ನು ಒದಗಿಸುವುದು | |
| 8 | ಬಿಡಿಎ ವ್ಯಾಪ್ತಿಯಲ್ಲೇ ಅನಧಿಕೃತ ಕಟ್ಟಡಗಳು/ ಬಡಾವಣೆಗಳು / ನಾಯಿಕೊಡೆಗಳಂತೆ ತಲೆ ಎತ್ತಿದ್ದರೂ, ಸಕ್ಷಮ ಪ್ರಾಧಿಕಾರವಾಗಿರುವ ಬಿಡಿಎ ಇದನ್ನು ತಡೆಗಟ್ಟದಿರಲು ಕಾರಣಗಳೇನು? | |
| 9 | ಮೇಲ್ಕಂಡ ಅಕ್ರಮಗಳು ನಡೆಯಲು ಕಾರಣಕರ್ತರಾಗಿರುವ / ಶಾಮೀಲಾಗಿರುವ ಅಧಿಕಾರಿಗಳು / ನೌಕರರ ಮೇಲೆ ಏನು ಕ್ರಮಕೈಗೊಳ್ಳಲಾಗಿದೆ? ವಿವರಗಳನ್ನು ಒದಗಿಸುವುದು | ಮಾಹಿತಿಯನ್ನು ಕ್ರೂಢೀಕರಿಸಿ ನೀಡಲು ಕಾಲಾವಕಾಶ ಕೋರಿದೆ. |
| 10 | ಅನಧಿಕೃತ ಕಟ್ಟಡಗಳು / ಬಡಾವಣೆಗಳ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲು 01/11/2007 ರಿಂದ ಈವರೆಗೂ ಪತ್ರಿಕೆಗಳ ಮೂಲಕ ತಮ್ಮ ಪ್ರಾಧಿಕಾರ ಕೊಟ್ಟಿರುವ ಪ್ರಕಟಣೆಗಳ ಪ್ರತಿಗಳನ್ನು ಒದಗಿಸುವುದು | ಅನಧಿಕೃತ ಕಟ್ಟಡಗಳು / ಬಡಾವಣೆಗಳ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲು ಪ್ರಾಧಿಕಾರ ನೀಡಿರುವ ಪ್ರಕಟಣೆಗಳ ಪ್ರತಿಗಳನ್ನು ಲಗತ್ತಿಸಿದೆ. ಅನುಬಂಧ-2 |
| 11 | ಬಿಡಿಎ ವ್ಯಾಪ್ತಿಯಲ್ಲಿ ಭೂಕಬಳಿಕೆ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲು 01/11/2007 ರಿಂದ ಈವರೆಗೂ ತಮ್ಮ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಿದ ಆಯುಕ್ತರುಗಳಿಗೆ ತಮ್ಮ ಪ್ರಾಧಿಕಾರದ ಅಧ್ಯಕ್ಷರು, ತಮ್ಮ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರ ನೀಡಿರುವ ಲಿಖಿತ ಸೂಚನೆ / ನಿರ್ದೇಶನಗಳ ಪ್ರತಿಗಳನ್ನು ಒದಗಿಸುವುದು | ಮಾಹಿತಿಯನ್ನು ಕ್ರೂಢೀಕರಿಸಿ ನೀಡಲು ಕಾಲಾವಕಾಶ ಕೋರಿದೆ. |
| 12 | ಬಿಡಿಎ ವ್ಯಾಪ್ತಿಯಲ್ಲಿ ವರದಿಯಾಗಿರುವ ಭೂಕಬಳಿಕೆ ಪ್ರಕರಣಗಳಲ್ಲಿ ಕ್ರಮತೆಗೆದುಕೊಳ್ಳಲು 01/11/2007 ರಿಂದ ಈವರೆಗೂ ಬಿಡಿಎನಲ್ಲಿ ಕಾರ್ಯನಿರ್ವಹಿಸಿದ ಆಯುಕ್ತರುಗಳು ತಮ್ಮ ಕೆಳಹಂತದ ಅಧಿಕಾರಿಗಳಿಗೆ ನೀಡಿರುವ ಲಿಖಿತ ಸೂಚನೆ / ನಿರ್ದೇಶನಗಳ ಪ್ರತಿಗಳನ್ನು ಒದಗಿಸುವುದು | ಮಾಹಿತಿಯನ್ನು ಕ್ರೂಢೀಕರಿಸಿ ನೀಡಲು ಕಾಲಾವಕಾಶ ಕೋರಿದೆ. |

| | | |
|---|---|---|
| 14 | ಬಿಡಿಎಯ ಆಸ್ತಿ ವಿವರಗಳನ್ನು ನಿಮ್ಮ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆಯೇ? ಈವರೆಗೂ ಪ್ರಕಟಿಸಿಲ್ಲದಿದ್ದರೆ ಕಾರಣಗಳೇನು? ಪ್ರಕಟಿಸಿಲ್ಲದಿದ್ದರೆ ಅತೀ ಶೀಘ್ರದಲ್ಲೇ ಅದನ್ನು ಪ್ರಕಟಿಸಲು ಕ್ರಮಕೈಗೊಳ್ಳುವುದರ ಬಗ್ಗೆ ಯಾವ ಕಾಲಮಿತಿಯಲ್ಲಿ ಮಾಡಲಾಗುವುದೆಂದು ಮಾಹಿತಿ ನೀಡುವುದು. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಪ್ರಾಧಿಕಾರದ ಆಸ್ತಿಗಳಾದ ಉದ್ಯಾನಗಳು ಹಾಗೂ ಆಟದ ಮೈದಾನಗಳ ಪಟ್ಟಿಯನ್ನು ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಗರೀಕ ಸೌಲಭ್ಯ (ಸಿಎ) ನಿವೇಶನಗಳ ಹಾಗೂ ವಾಣಿಜ್ಯ ಸಮುಚ್ಛಯಗಳ ಕಡತಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. www.bdabangalore.org |

ಆಯುಕ್ತರು,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,

ಬೆಂಗಳೂರು.

**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯಿಂದ ಆಯುಕ್ತರಿಗೆ ದಿನಾಂಕ: 09-10-2014 ರಂದು ನೀಡಲಾಗಿರುವ ಮನವಿ ಪತ್ರದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರದ ಪೂರ್ವ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿನ ಬಡಾವಣೆಗಳ ಕುರಿತಾದ ಮಾಹಿತಿ.**

| ಕ್ರ.ಸಂ | ಕೋರಿರುವ ಮಾಹಿತಿ | ಒದಗಿಸಲಾಗುತ್ತಿರುವ ಮಾಹಿತಿ |
|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಪಾರ್ಕ್, ಆಟದ ಮೈದಾನ, ಸಿ.ಎ.ನಿವೇಶನ, ಕಾಲುವೆ, ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು. | ಪೂರ್ವ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆಗಳಲ್ಲಿನ ಪಾರ್ಕ್, ಆಟದ ಮೈದಾನ, ಕಾಲುವೆ, ರಸ್ತೆ ಇವುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯವ್ಯಾಪ್ತಿಗೆ ಸೇರಿದ್ದು, ಪ್ರಾಧಿಕಾರದ ಆಸ್ತಿಯಾದ ಸಿ.ಎ.ನಿವೇಶನಗಳಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲ. |
| 2 | ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿ.ಡಿ.ಎ. ಗೆ ವಾಪಸ್ ಪಡೆಯಲಾಗಿದೆ? ವಿವರಗಳನ್ನು ಒದಗಿಸುವುದು. | ಒತ್ತುವರಿ ಇಲ್ಲದಿರುವುದರಿಂದ ವಾಪಸ್ ಪಡೆದಿರುವ ಪ್ರಕರಣಗಳಿಲ್ಲ. |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 4 | ವಾಪಸ್ ಪಡೆಯಲಾಗಿರುವ ಪ್ರಕರಣಗಳೆಷ್ಟು? ಮತ್ತು ವಾಪಸ್ ಪಡೆಯಲಾಗದಿರುವುದಕ್ಕೆ ಕಾರಣಗಳೇನು? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 5 | ಬಿ.ಡಿ.ಎ ವ್ಯಾಪ್ತಿಯಲ್ಲಿ ಅಧಿಕೃತ ಬಡಾವಣೆಗಳು ಎಷ್ಟು? ಆ ಅಧಿಕೃತ ಬಡಾವಣೆಗಳಲ್ಲಿ ಸ್ಥಳೀಯ ಸಂಸ್ಥೆಗೆ/ಪ್ರಾಧಿಕಾರಕ್ಕೆ ವಿಹಿತವಾಗಬೇಕಿದ್ದ ಸಿ.ಎ. ನಿವೇಶನ, ಪಾರ್ಕು, ಆಟದ ಮೈದಾನ, ರಸ್ತೆ, ಕಾಲುವೆ ಮುಂತಾದ ಸ್ಥಳಗಳು ನಿಯಮಾನುಸಾರ ಸಂಸ್ಥೆ/ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು. | ಪೂರ್ವ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಇರುವ ಖಾಸಗಿ ಅಧಿಕೃತ ಬಡಾವಣೆಗಳಲ್ಲಿ ಪ್ರಾಧಿಕಾರಕ್ಕೆ ವಿಹಿತವಾಗಿರುವ (Relinquished) ಸಿ.ಎ. ನಿವೇಶನ, ಪಾರ್ಕ್, ಆಟದ ಮೈದಾನಗಳ ವಿವರಗಳನ್ನು ಒಳಗೊಂಡ ಪ್ರತ್ಯೇಕ ಪಟ್ಟಿ ಲಗತ್ತಿಸಿದೆ. |
| 6 | ವರ್ಗಾಯಿಸಲಾಗದಿದ್ದರೆ ಬಿ.ಡಿ.ಎ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ಪೂರ್ವ ವಿಭಾಗದ ವ್ಯಾಪ್ತಿಯಲ್ಲಿ ಯಾವುದೇ ಪ್ರಕರಣಗಳು ವರ್ಗಾಯಿಸಿರುವುದಿಲ್ಲ. |
| 7 | ಬಿ.ಡಿ.ಎ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳು/ಬಡಾವಣೆಗಳು/ಅಪಾರ್ಟ್‌ಮೆಂಟ್ ಗಳು ಎಷ್ಟು? ವಿವರಗಳನ್ನು ಒದಗಿಸುವುದು. | ಬಿಡಿಎ ಯೋಜನಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳಿಂದ ನಕ್ಷೆ ಮಂಜೂರಾತಿ ಪಡೆದು, ಅನಧಿಕೃತವಾಗಿ ಕೆಲವು ಕಟ್ಟಡಗಳನ್ನು, ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. |
| 8 | ಬಿ.ಡಿ.ಎ ವ್ಯಾಪ್ತಿಯಲ್ಲೇ ಅನಧಿಕೃತ ಕಟ್ಟಡಗಳು/ಬಡಾವಣೆಗಳು/ಅಪಾರ್ಟ್‌ಮೆಂಟುಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದರೂ, ಸಕ್ಷಮ ಪ್ರಾಧಿಕಾರವಾಗಿರುವ ಬಿ.ಡಿ.ಎ ಇದನ್ನು ತಡೆಗಟ್ಟದಿರಲು ಕಾರಣಗಳೇನು? | ಬಿಡಿಎ ಯೋಜನಾ ಪ್ರದೇಶದಲ್ಲಿ ಗ್ರಾಮ ಪಂಚಾಯ್ತಿಗಳಿಂದ ನಕ್ಷೆ ಮಂಜೂರಾತಿ ನೀಡದಂತೆ, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರುಗಳಿಗೆ ಸೂಚನೆ ನೀಡುವಂತೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಈ ವಿಭಾಗದಿಂದ ಪತ್ರಗಳನ್ನು ಬರೆಯಲಾಗಿದೆ. |

Executive Engineer
East Division
Bangalore Development Authority
HSR Complex, Bangalore-560 034

ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿಯಿಂದ ಆಯುಕ್ತರಿಗೆ ದಿನಾಂಕ: 09-10-2014 ರಂದು ನೀಡಲಾಗಿರುವ ಮನವಿ ಪತ್ರದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರದ ಪಶ್ಚಿಮ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಬಡಾವಣೆಗಳ ಕುರಿತಾದ ಮಾಹಿತಿ

| ಕ್ರಮ ಸಂಖ್ಯೆ | ಕೋರಿರುವ ಮಾಹಿತಿ | ನೀಡಿರುವ ಮಾಹಿತಿ |
|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಪಾರ್ಕ್ ಆಟದ ಮೈದಾನ, ಸಿಎ ನಿವೇಶನ ಕಾಲುವೆ ಮತ್ತು ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು. | ಪಶ್ಚಿಮ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆಗಳಲ್ಲಿನ ಪಾರ್ಕ್, ಆಟದ ಮೈದಾನ, ಕಾಲುವೆ ರಸ್ತೆ ಇವುಗಳು ಬೃಹತ್ ಬೆಂಗಳೂರು ಮಹನಗರ ಪಾಲಿಕೆ ಕಾರ್ಯವ್ಯಾಪ್ತಿಗೆ ಸೇರಿದ್ದು, ಪ್ರಾಧಿಕಾರದ ಆಸ್ತಿಯಾದ ಸಿಎ ನಿವೇಶನಗಳಲ್ಲಿ ಯಾವುದೇ ಒತ್ತವರಿ ಇರುವುದಿಲ್ಲ. |
| 2 | ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿಡಿಎಗೆ ವಾಪಸ್ ಪಡೆಯಲಾಗಿದೆ ? ವಿವರಗಳನ್ನು ಒದಗಿಸುವುದು. | ಒತ್ತುವರಿ ಇಲ್ಲದಿರುವುದರಿಂದ ವಾಪಸ್ ಪಡೆದಿರುವ ಪ್ರಕರಣಗಳಿಲ್ಲ. |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು ? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 4 | ವಾಪಸ್ ಪಡೆಯಲಾಗದಿರುವ ಪ್ರಕರಣಗಳೆಷ್ಟು ? ಮತ್ತು ವಾಪಸ್ ಪಡೆಯಲಾಗದಿರುವುದಕ್ಕೆ ಕಾರಣಗಳೇನು ? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 5 | ಬಿಡಿಎ ವ್ಯಾಪ್ತಿಯಲ್ಲಿ ಅಧಿಕೃತ ಬಡಾವಣೆಗಳೆಷ್ಟು ? ಆ ಅಧಿಕೃತ ಬಡಾವಣೆಗಳಲ್ಲಿ ಸ್ಥಳೀಯ ಸಂಸ್ಥೆಗೆ ಪ್ರಾಧಿಕಾರಕ್ಕೆ ವಿಹಿತವಾಗಬೇಕಾಗಿದ್ದ ಸಿಎ ನಿವೇಶನ, ಪಾರ್ಕ್, ಆಟದ ಮೈದಾನ ರಸ್ತೆ, ಕಾಲುವೆ ಮುಂತಾದ ಸ್ಥಳಗಳು ನಿಯಮಾನುಸಾರ ಸಂಸ್ಥೆ/ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು. | ಪಶ್ಚಿಮ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಒಟ್ಟು 82 ಅಧೀಕೃತ ಖಾಸಗಿ ಬಡಾವಣೆಗಳಿರುತ್ತವೆ. ಈ ಪೈಕಿ 65 ಬಡಾವಣೆಗಳಲ್ಲಿನ ಸಿಎ ಮತ್ತು ಪಾರ್ಕ ಹಾಗೂ ಬಯಲು ಜಾಗವನ್ನು ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದಕ್ಕೆ ಹಸ್ತಾಂತರಿಸಲಾಗಿದೆ. |
| 6 | ವರ್ಗಾಯಿಸಲಾಗದಿದ್ದರೆ ಬಿಡಿಎ ಕೈಗೊಂಡಿರುವ ಕ್ರಮಗಳೇನು ? ವಿವರಗಳನ್ನು ಒದಗಿಸುವುದು. | ಉಳಿದ 17 ಅಧಿಕೃತ ಖಾಸಗಿ ಬಡಾವಣೆಗಳ ಸಂಬಂಧಪಟ್ಟ ಸಂಘ / ಸಂಸ್ಥೆಗಳಿಗೆ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಕೂಡಲೇ ಹಸ್ತಾಂತರಿಸಲು ನೋಟೀಸ್ ಅನ್ನು ಜಾರಿ ಮಾಡಲಾಗಿದೆ. |

**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯಿಂದ ಆಯುಕ್ತರಿಗೆ ದಿನಾಂಕ: 09-10-2014 ರಂದು ನೀಡಲಾಗಿರುವ ಮನವಿ ಪತ್ರದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರದ ಉತ್ತರ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿನ ಬಡಾವಣೆಗಳ ಕುರಿತಾದ ಮಾಹಿತಿ.**

| ಕ್ರ.ಸಂ | ಕೋರಿರುವ ಮಾಹಿತಿ | ಒದಗಿಸಲಾಗುತ್ತಿರುವ ಮಾಹಿತಿ |
|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಪಾರ್ಕ್, ಆಟದ ಮೈದಾನ, ಸಿ.ಎ.ನಿವೇಶನ, ಕಾಲುವೆ, ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು. | ಉತ್ತರ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆಗಳಲ್ಲಿನ ಪಾರ್ಕ್, ಆಟದ ಮೈದಾನ, ಕಾಲುವೆ, ರಸ್ತೆ ಇವುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯವ್ಯಾಪ್ತಿಗೆ ಸೇರಿದ್ದು, ಪ್ರಾಧಿಕಾರದ ಆಸ್ತಿಯಾದ ಸಿ.ಎ.ನಿವೇಶನಗಳಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲ. |
| 2 | ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿ.ಡಿ.ಎ. ಗೆ ವಾಪಸ್ ಪಡೆಯಲಾಗಿದೆ? ವಿವರಗಳನ್ನು ಒದಗಿಸುವುದು. | ಒತ್ತುವರಿ ಇಲ್ಲದಿರುವುದರಿಂದ ವಾಪಸ್ ಪಡೆದಿರುವ ಪ್ರಕರಣಗಳಿಲ್ಲ. |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 4 | ವಾಪಸ್ ಪಡೆಯಲಾಗಿರುವ ಪ್ರಕರಣಗಳೆಷ್ಟು? ಮತ್ತು ವಾಪಸ್ ಪಡೆಯಲಾಗದಿರುವುದಕ್ಕೆ ಕಾರಣಗಳೇನು? ವಿವರಗಳನ್ನು ಒದಗಿಸುವುದು. | ಅನ್ವಯಿಸುವುದಿಲ್ಲ |
| 5 | ಬಿ.ಡಿ.ಎ ವ್ಯಾಪ್ತಿಯಲ್ಲಿ ಅಧಿಕೃತ ಬಡಾವಣೆಗಳು ಎಷ್ಟು? ಆ ಅಧಿಕೃತ ಬಡಾವಣೆಗಳಲ್ಲಿ ಸ್ಥಳೀಯ ಸಂಸ್ಥೆಗೆ/ಪ್ರಾಧಿಕಾರಕ್ಕೆ ವಿಹಿತವಾಗಬೇಕಿದ್ದ ಸಿ.ಎ. ನಿವೇಶನ, ಪಾರ್ಕು, ಆಟದ ಮೈದಾನ, ರಸ್ತೆ, ಕಾಲುವೆ ಮುಂತಾದ ಸ್ಥಳಗಳು ನಿಯಮಾನುಸಾರ ಸಂಸ್ಥೆ/ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು. | ಉತ್ತರ ವಿಭಾಗದ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಇರುವ ಖಾಸಗಿ ಅಧಿಕೃತ ಬಡಾವಣೆಗಳಲ್ಲಿ ಪ್ರಾಧಿಕಾರಕ್ಕೆ ವಿಹಿತವಾಗಿರುವ (Relinquished) ಸಿ.ಎ. ನಿವೇಶನ, ಪಾರ್ಕ್, ಆಟದ ಮೈದಾನಗಳ ವಿವರಗಳನ್ನು ಒಳಗೊಂಡ ಪ್ರತ್ಯೇಕ ಪಟ್ಟಿ ಲಗತ್ತಿಸಿದೆ. |
| 6 | ವರ್ಗಾಯಿಸಲಾಗದಿದ್ದರೆ ಬಿ.ಡಿ.ಎ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ಮಿನಿಸ್ಟ್ರಿ ಆಫ್ ಕಮ್ಯೂನಿಕೇಶನ್ಸ್ ಬಡಾವಣೆಯಲ್ಲಿ ಮಾತ್ರ ಪ್ರಾಧಿಕಾರಕ್ಕೆ ವಿಹಿತವಾಗಬೇಕಿದ್ದ ಸುಮಾರು 3-00 ಎಕರೆ ಜಮೀನನ್ನು ವಿಹಿತವಾಗಿಲ್ಲದಿರುವುದರಿಂದ ಬಡಾವಣೆಯ ಅಭಿವೃದ್ಧಿದಾರರ ಮೇಲೆ ಕ್ರಿಮಿನಲ್ ವಿಚಾರಣೆ ನಡೆಸಲು ಸಿ.ಓ.ಡಿ. ಗೆ ವಹಿಸುವ ಬಗ್ಗೆ ಆಯುಕ್ತರ ಪರಿಶೀಲನೆಯಲ್ಲಿರುತ್ತದೆ. |
| 7 | ಬಿ.ಡಿ.ಎ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳು/ಬಡಾವಣೆಗಳು/ಅಪಾರ್ಟ್‌ಮೆಂಟ್ ಗಳು ಎಷ್ಟು? ವಿವರಗಳನ್ನು ಒದಗಿಸುವುದು. | ಬಡಾವಣೆ ರಚನೆಗಾಗಿ ಪ್ರಾಧಿಕಾರದಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಒತ್ತುವರಿ ವಿವರಗಳನ್ನು ಒಳಗೊಂಡ ಪ್ರತ್ಯೇಕ ಪಟ್ಟಿ ಲಗತ್ತಿಸಿದೆ. |
| 8 | ಬಿ.ಡಿ.ಎ ವ್ಯಾಪ್ತಿಯಲ್ಲೇ ಅನಧಿಕೃತ ಕಟ್ಟಡಗಳು/ಬಡಾವಣೆಗಳು/ಅಪಾರ್ಟ್‌ಮೆಂಟುಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದರೂ, ಸಕ್ಷಮ ಪ್ರಾಧಿಕಾರವಾಗಿರುವ ಬಿ.ಡಿ.ಎ ಇದನ್ನು ತಡೆಗಟ್ಟದಿರಲು ಕಾರಣಗಳೇನು? | ಪ್ರಾಧಿಕಾರದ ವ್ಯಾಪ್ತಿಯ ಪ್ರದೇಶದಲ್ಲಿ ಇರುವ ಒತ್ತುವರಿಗಳ ಬಗ್ಗೆ ನ್ಯಾಯಾಲಯಗಳಲ್ಲಿ ಇರುವ ಮೊಕದ್ದಮೆಗಳು ಇತ್ಯರ್ಥವಾದಂತೆ ಕಾಲಕಾಲಕ್ಕೆ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಶ್ರೀ.ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ಜಂಟಿ ಸದನ ಸಮಿತಿಯು 2007 ರಲ್ಲಿ ಭೂಕಬಳಿಕೆಯ (ಸರ್ಕಾರಿ ಜಮೀನಿನಗೆ ಸುಳ್ಳು ದಾಖಲೆ ಸೃಷ್ಟಿಸಿ) ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವರದಿಯಲ್ಲಿ ಪ್ರಸ್ತಾಪಿಸಿರುವ ಬಿಡಿಎ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಮಾಹಿತಿಯನ್ನು ಒದಗಿಸಬೇಕೆಂದು ಕೋರಿದ್ದು, ಸದರಿ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.**

**ಪ್ರಾಧಿಕಾರದ ದಕ್ಷಿಣ ವಿಭಾಗಕ್ಕೆ ಸಂಬಂಧಿಸಿದಂತೆ ವಿವರಗಳು.**

| ಕ್ರಸಂ | ಮಾಹಿತಿ | ವಿವರ |
|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಪಾರ್ಕು, ಆಟದ ಮೈದಾನ, ಸಿ.ಎ.ನಿವೇಶನ, ಕಾಲುವೆ, ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು. | ಈ ವಿಭಾಗದ ವ್ಯಾಪ್ತಿಯಲ್ಲಿ ಯಾವುದೇ ಪ್ರಕರಣವಿರುವುದಿಲ್ಲ. |
| 2 | ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿಡಿಎಗೆ ವಾಪಸ್ ಪಡೆಯಲಾಗಿದೆ? ವಿವರಗಳನ್ನು ಒದಗಿಸುವುದು. | ---ಅನ್ವಯಿಸುವುದಿಲ್ಲ--- |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ---ಅನ್ವಯಿಸುವುದಿಲ್ಲ--- |
| 4 | ವಾಪಸ್ ಪಡೆಯಲಾಗದಿರುವ ಪ್ರಕಣಗಳೆಷ್ಟು? ಮತ್ತು ವಾಪಸ್ ಪಡೆಯಲಾಗದಿರುವುದಕ್ಕೆ ಕಾರಣಗಳೇನು? ವಿವರಗಳನ್ನು ಒದಗಿಸುವುದು. | ---ಅನ್ವಯಿಸುವುದಿಲ್ಲ--- |
| 5 | ಬಿಡಿಎ ವ್ಯಾಪ್ತಿಯಲ್ಲಿ ಅಧಿಕೃತ ಬಡಾವಣೆಗಳು ಎಷ್ಟು? ಆ ಅಧಿಕೃತ ಬಡಾವಣೆಗಳಲ್ಲಿ ಸ್ಥಳೀಯ ಸಂಸ್ಥೆಗೆ/ಪ್ರಾಧಿಕಾರಕ್ಕೆ ವಿಹಿತಬೇಕಾಗಿದ್ದ ಸಿ.ಎ.ನಿವೇಶನ, ಪಾರ್ಕು, ಆಟದ ಮೈದಾನ, ರಸ್ತೆ, ಕಾಲುವೆ ಮುಂತಾದ ಸ್ಥಳಗಳು ನಿಯಮಾನುಸಾರ ಸಂಸ್ಥೆ/ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು. | ಹಾಲಿ ಬಿ.ಡಿ.ಎ. ವ್ಯಾಪ್ತಿಯಲ್ಲಿರುವ ಅಧಿಕೃತ ಬಡಾವಣೆಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br>ಪ್ರಾಧಿಕಾರಕ್ಕೆ ವಿಹಿತವಾಗಬೇಕಿದ್ದ ಪಾರ್ಕ್ ಮತ್ತು ಆಟದ ಮೈದಾನ ಪಟ್ಟಿಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br>ಪ್ರಾಧಿಕಾರಕ್ಕೆ ವಿಹಿತವಾಗಬೇಕಿದ್ದ ಸಿ.ಎ. ನಿವೇಶನಗಳ ಪಟ್ಟಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.<br>ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ನಮೂದಿಸಿರುವ ಎಲ್ಲಾ ಪಾರ್ಕ್ ಮತ್ತು ಆಟದ ಮೈದಾನ ಮತ್ತು ಸಿ.ಎ.ನಿವೇಶನಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿರುತ್ತದೆ. |
| 6 | ವರ್ಗಾಯಿಸಲಾಗದಿದ್ದರೆ ಬಿಡಿಎ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ---ಅನ್ವಯಿಸುವುದಿಲ್ಲ--- |
| 7 | ಬಿಡಿಎ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳು/ಬಡಾವಣೆಗಳು/ ಅಪಾರ್ಟಮೆಂಟುಗಳು ಎಷ್ಟು? ವಿವರಗಳನ್ನು ಒದಗಿಸುವುದು. | ಬಿಡಿಎ ಯೋಜನಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳಿಂದ ನಕ್ಷೆ ಮಂಜೂರಾತಿ ಪಡೆದು, ಅನಧಿಕೃತವಾಗಿ ಕೆಲವು ಕಟ್ಟಡಗಳನ್ನು, ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. |
| 8 | ಬಿಡಿಎ ವ್ಯಾಪ್ತಿಯಲ್ಲೇ ಅನಧಿಕೃತ ಕಟ್ಟಡಗಳು/ ಬಡಾವಣೆಗಳು/ ಅಪಾರ್ಟ್‌ಮೆಂಟ್‌ಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದರೂ, ಸಕ್ಷಮ ಪ್ರಾಧಿಕಾರವಾಗಿರುವ ಬಿಡಿಎ ಇದನ್ನು ತಡೆಗಟ್ಟದಿರಲು ಕಾರಣಗಳೇನು? | ಬಿಡಿಎ ಯೋಜನಾ ಪ್ರದೇಶದಲ್ಲಿ ಗ್ರಾಮ ಪಂಚಾಯ್ತಿಗಳಿಂದ ನಕ್ಷೆ ಮಂಜೂರಾತಿ ನೀಡದಂತೆ, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರುಗಳಿಗೆ ಸೂಚನೆ ನೀಡುವಂತೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಈ ವಿಭಾಗದಿಂದ ಪತ್ರಗಳನ್ನು ಬರೆಯಲಾಗಿದೆ. |

ಕಾರ್ಯಪಾಲಕ ಅಭಿಯಂತರರು
ದಕ್ಷಿಣ ವಿಭಾಗ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.